

ಅರುಣ ಪಿ. ಭಟ್ಟ

# ವಾರಭವಿಷ್ಯ 10.08.2023ರಿಂದ 16.08.2023ರವರೆಗೆ




ಭೂ ವ್ಯವಹಾರಗಳಲ್ಲಿ ಒಳ್ಳೆಯ ಲಾಭಗಳಿಸುವ ಅವಕಾಶ. ದೂರದ ಪ್ರದೇಶಗಳಿಗೆ ಪ್ರಯಾಣ ಮಾಡುವ ಸಾಧ್ಯತೆ. ಯಾವುದೇ ಮುಖ್ಯ ಕಾಗದ ಪತ್ರಗಳಿಗೆ ಸಹಿ ಹಾಕುವ ಮುನ್ನ ಪರಿಶೀಲನೆ ನಡೆಸಿ. ಉದ್ಯೋಗದಲ್ಲಿ ಬಡ್ತಿ ದೊರೆಯುವ ಸಾಧ್ಯತೆ ಹೆಚ್ಚಿದೆ. ಆರೋಗ್ಯ ವಿಚಾರದಲ್ಲಿ ಹೆಚ್ಚಿನ ಆತಂಕ ಪಡುವ ಅಗತ್ಯ ಇಲ್ಲ. ನಿವೇಶನ ಖರೀದಿಗೆ ಸಾಲಕ್ಕೆ ಸ್ಪಷ್ಟತೆ ದೊರೆಯುತ್ತದೆ. ಶುಭದಿನ 16. ಹನುಮಾನ್ ಚಾಲೀಸ್ ಓದಿರಿ.




ನೀವು ನಂಬಿದ ವಿಚಾರಗಳನ್ನು ಪ್ರಸ್ತುತಪಡಿಸುವುದಕ್ಕೆ ಬಹಳ ಶ್ರಮ ಪಡುತ್ತೀರಿ. ಹಳೆಯ ಸ್ನೇಹಿತರು ಸಾಲ ಕೇಳಿದರು ಎಂದು ತಕ್ಷಣ ನೀಡಿದರೆ ವಾಪಸ್ ಬರುವುದು ಕಷ್ಟ. ಕಾನೂನು ವಿಚಾರಗಳು ನಿಮ್ಮ ವಿರುದ್ಧ ಸಾಗುತ್ತವೆ. ಬೇರೊಬ್ಬರು ನೀಡಿದ ವಸ್ತು ಕಳೆದುಕೊಳ್ಳುವ ಅಪಾಯ ಇದೆ. ವಾಹನ ಚಾಲನೆ ಮಾಡುವಾಗ ಎಚ್ಚರ. ಹತ್ತಿರದ ಪ್ರವಾಸ ಕೈಗೊಳ್ಳಲಿದ್ದೀರಿ. ಶುಭದಿನ 12. ಗಣೇಶಪಂಚರತ್ನ ಸ್ತೋತ್ರ ಪಠಣ ಮಾಡಿರಿ.




ಒಂದೇ ಸಲಕ್ಕೆ ಹಲವು ಅವಕಾಶಗಳು ನಿಮ್ಮನ್ನು ಹುಡುಕಿಕೊಂಡು ಬರುತ್ತವೆ. ಆಯ್ಕೆ ಬಗ್ಗೆ ಸ್ಪಷ್ಟತೆ ಇರಲಿ. ಸರ್ಕಾರಿ ನೌಕರರಿಗೆ ವರ್ಗಾವಣೆ ಆದರೂ ಆಗಬಹುದು. ವೈಯಕ್ತಿಕ ಸಂಬಂಧದಲ್ಲಿ ಬಹಳ ಹುಷಾರಾಗಿರಬೇಕು. ಕೋರ್ಟ್ ಪ್ರಕರಣ ನಡೆಯುತ್ತಿದ್ದರೆ ಆ ಕಡೆ ಹೆಚ್ಚಿನ ಗಮನ ನೀಡಬೇಕು. ಇಲ್ಲದಿದ್ದಲ್ಲಿ ದೊಡ್ಡ ಮಟ್ಟದಲ್ಲಿ ನಷ್ಟ ಅನುಭವಿಸಬೇಕಾಗುತ್ತದೆ. ಶುಭದಿನ 11. ಕಾಲಭೈರವಾಷ್ಟಕ ಸ್ತೋತ್ರ ಪಠಿಸಿರಿ.




ನಿಮ್ಮ ಆದಾಯದಲ್ಲಿ ಈ ವಾರ ಹೆಚ್ಚಳ ಕಾಣಿಸಿಕೊಳ್ಳಲಿದೆ. ಈ ಹಿಂದೆ ನೀವು ಹಾಕಿದ ಶ್ರಮಕ್ಕೆ ಪ್ರತಿಫಲ ದೊರೆಯುತ್ತದೆ. ಸಾಮಾಜಿಕವಾಗಿ ನಿಮ್ಮ ವರ್ಚಸ್ಸು, ಕೀರ್ತಿ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ಈ ವಾರ ಯಶಸ್ಸು ದೊರೆಯುವ ಅವಕಾಶಗಳು ಹೆಚ್ಚಿದೆ. ಭಾವನಾತ್ಮಕ ಸಂಬಂಧದಲ್ಲಿ ಆಡಿದ ಮಾತುಗಳು ಅಪಾಯಕ್ಕೆ ಕಾರಣ ಆಗಬಹುದು. ಶುಭದಿನ 13. ವಿಷ್ಣುಸಹಸ್ರನಾಮ ಓದಿರಿ.




ನಿಮ್ಮ ವೈಯಕ್ತಿಕ ವರ್ಚಸ್ಸಿನಿಂದ ಇತರರಿಗೆ ಸಹಾಯ ಮಾಡಲು ಮುಂದಾಗುತ್ತೀರಿ. ಬಹಳ ಕಾಲದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದರೆ ಅದರ ಶ್ರಮದ ಫಲವನ್ನು ಪಡೆಯಲು ಇದು ಸರಿಯಾದ ಕಾಲ. ಪೋಷಕರಿಗೆ ಮಕ್ಕಳ ವರ್ತನೆ, ಬೆಳವಣಿಗೆ ಹಾಗೂ ನಡವಳಿಕೆಯಿಂದ ಸಂತೋಷ ಉಂಟಾಗುತ್ತದೆ. ಆರೋಗ್ಯ ಸಮಸ್ಯೆ ಕಾಡಬಹುದು. ಶುಭದಿನ 15. ಶ್ರೀಗೋವಿಂದಾಷ್ಟಕಮ್ ಪಠಿಸಿರಿ.




ತಾಯಿಯ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ. ನಿಮಗೂ ಕೆಮ್ಮು ನೆಗಡಿಯಂಥ ಅನಾರೋಗ್ಯ ಸಮಸ್ಯೆಗಳು ಕಾಡಬಹುದು. ವಾರದ ಮೊದಲಾರ್ಧದ ನಂತರ ಆರ್ಥಿಕವಾಗಿ ಬಲ ಬರುತ್ತದೆ. ಉಳಿತಾಯ ಮಾಡುವ ಮನಸ್ಸು ಬರುತ್ತದೆ. ಮಕ್ಕಳ ಪ್ರಗತಿಯಿಂದ ಹೆಮ್ಮೆ–ಸಂತೋಷ ಉಂಟಾಗುತ್ತದೆ. ಬಾಕಿ ಹಣ ಬರಬೇಕಾಗಿದ್ದಲ್ಲಿ ಬರುವ ಸಾಧ್ಯತೆ ಇದೆ. ಶುಭದಿನ 14. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಉದ್ಯೋಗ ನಿಮಿತ್ತ ದೂರ ಪ್ರಯಾಣ ಮಾಡಬೇಕಾದ ಸನ್ನಿವೇಶ ಎದುರಾಗಲಿದೆ. ಹಣ ಹೂಡಿಕೆಯಲ್ಲಿ ಉತ್ತಮ ಲಾಭ ಆಗಲಿದೆ. ಉದ್ಯೋಗ ಸ್ಥಳದಲ್ಲಿ ಸ್ವಲ್ಪ ಮಟ್ಟಿಗೆ ಒತ್ತಡ ಕಾಣಿಸಿಕೊಳ್ಳಬಹುದು. ಆರೋಗ್ಯದಲ್ಲೂ ಏರುಪೇರಾಗುತ್ತದೆ. ಸೋದರ–ಸೋದರಿಯರ ಜತೆಗೆ ಉತ್ತಮ ಬಾಂಧವ್ಯ ಇರುತ್ತದೆ. ಆರೋಗ್ಯ ಉತ್ತಮವಾಗಿರುತ್ತದೆ. ಶುಭದಿನ 11. ದೇವಿ ಆರಾಧನೆ, ಸೌಂದರ್ಯಲಹರಿ ಪಠಿಸಿರಿ.




ಹೊಸದಾಗಿ ಮನೆ ಕಟ್ಟಬೇಕು ಎಂದು ಆಲೋಚನೆ ಮಾಡುತ್ತಿರುವವರಿಗೆ ಯೋಜನೆ ಅನುಷ್ಠಾನಕ್ಕೆ ಸೂಕ್ತ ಸಮಯ. ನೌಕರಸ್ಥರಿಗೆ ಮೇಲಧಿಕಾರಿಗಳ ಜೊತೆಗೆ ಉತ್ತಮ ಸಂಬಂಧ ಇರುತ್ತದೆ. ಪ್ರೀತಿ–ಪ್ರೇಮದಲ್ಲಿ ಇರುವವರು ಸಂಗಾತಿ ಜತೆಗೆ ಪ್ರಮುಖವಾದ ವಿಚಾರಗಳನ್ನು ಚರ್ಚೆ ನಡೆಸಲಿದ್ದೀರಿ. ವಾರಾಂತ್ಯಕ್ಕೆ ಸಕಾರಾತ್ಮಕ ಬೆಳವಣಿಗೆಗಳನ್ನು ಕಾಣುತ್ತೀರಿ. ಶುಭದಿನ 14. ಶಿವಪೂಜೆ, ಶಿವಪಂಚಾಕ್ಷರಸ್ತೋತ್ರ ಪಠಿಸಿರಿ.




ಉದ್ಯೋಗಸ್ಥರಿಗೆ ಮೇಲಧಿಕಾರಿಗಳಿಂದ ಪ್ರಶಂಸೆ. ವ್ಯಾಪಾರಸ್ಥರಿಗೆ ಸಮಸ್ಯೆಗಳು ಎದುರಾಗುವ ಸಂಭವ. ತಲೆನೋವು ಕಾಣಿಸಿಕೊಳ್ಳುತ್ತದೆ. ವಿವಾಹಿತರಿಗೆ ವೈವಾಹಿಕ ಜೀವನ ಚೆನ್ನಾಗಿರುತ್ತದೆ. ಸಂಗಾತಿ ಜತೆಗೆ ಸುಮಧುರವಾದ ಕ್ಷಣಗಳನ್ನು ಅನುಭವಿಸಲಿದ್ದೀರಿ. ಭೂಮಿ ಖರೀದಿಗೆ ಒಳ್ಳೆಯ ಸಮಯ. ಮನೆಯಲ್ಲಿ ಶುಭ ಕಾರ್ಯ ನಡೆಯುವ ಸಾಧ್ಯತೆ ಇದೆ. ಶುಭದಿನ 10. ದೇವ್ಯಪರಾಧಕ್ಷಮಾಪಣ ಸ್ತೋತ್ರ ಪಠಿಸಿರಿ.




ಸಾಮಾಜಿಕವಾಗಿ ಅದ್ಭುತವಾದ ಅವಕಾಶಗಳು ದೊರೆಯುತ್ತವೆ. ನಿಮ್ಮ ಜನಪ್ರಿಯತೆ ಕೂಡ ಹೆಚ್ಚಾಗಲಿದೆ. ವಿದ್ಯಾರ್ಥಿಗಳು ಹೆಚ್ಚು ಶ್ರಮವಹಿಸಿ ವ್ಯಾಸಂಗ ಮಾಡಿ, ಅಂದುಕೊಂಡ ಗುರಿಯನ್ನು ತಲುಪಲಿದ್ದೀರಿ. ಕೋರ್ಟ್ ವ್ಯಾಜ್ಯಗಳು ನಡೆಯುತ್ತಿದ್ದಲ್ಲಿ ಅದಕ್ಕಾಗಿ ಹೆಚ್ಚಿನ ಹಣ ಖರ್ಚು ಮಾಡಬೇಕಾಗುತ್ತದೆ. ಆರೋಗ್ಯವು ಉತ್ತಮವಾಗಿರುತ್ತದೆ. ಶುಭದಿನ 16. ಸಂಕಷ್ಟಹರ ಮಹಾಗಣಪತಿ ಪೂಜೆ ಮಾಡಿರಿ.




ಕೌಟುಂಬಿಕ ವಿಚಾರಗಳಲ್ಲಿ ಉತ್ತಮವಾದ ಪ್ರಗತಿ. ಆರೋಗ್ಯ ಉತ್ತಮವಾಗಿ ಇರುತ್ತದೆ. ಬಂಡವಾಳ ಹೂಡಿಕೆಗೆ ಹಲವು ಅವಕಾಶಗಳನ್ನು ಪರಿಶೀಲಿಸಲಿದ್ದೀರಿ. ಮಗ ಅಥವಾ ಮಗಳ ಸಲುವಾಗಿ ಮದುವೆ ಸಂಬಂಧಗಳನ್ನು ಹುಡುಕುತ್ತಿದ್ದಲ್ಲಿ ಅದರಲ್ಲಿ ಯಶಸ್ಸು ಕಾಣುವ ಅವಕಾಶ ಹೆಚ್ಚಾಗಿದೆ. ಸಂಬಂಧಿಕರು ನಿಮ್ಮ ಸಹಾಯ ಕೇಳಿಕೊಂಡು ಬರಲಿದ್ದಾರೆ. ಶುಭದಿನ 12. ಶ್ರೀ ಲಕ್ಷ್ಮೀ ನರಸಿಂಹಪಂಚರತ್ನ ಸ್ತೋತ್ರ ಪಠಿಸಿರಿ.




ವಾರ ಪೂರ್ತಿ ಕೆಲಸ, ಕೆಲಸ ಅಂತ ಕೆಲಸದಲ್ಲೇ ವ್ಯಸ್ತರಾಗುವಿರಿ. ಈ ಮಧ್ಯೆ ಶ್ವಾಸಕೋಶ ಸಮಸ್ಯೆ ಹಾಗೂ ರಕ್ತದಲ್ಲಿನ ದೋಷದಿಂದ ಅನಾರೋಗ್ಯ ಉಂಟಾಗುವ ಸಂಭವವಿದೆ. ಮನೆಯಲ್ಲಿ ಶುಭ ಕಾರ್ಯವೊಂದನ್ನು ಆಯೋಜಿಸುವಿರಿ. ಉದ್ಯೋಗಿಗಳಿಗೆ ನೀವು ಪಟ್ಟ ಶ್ರಮಕ್ಕೆ ಮೇಲಧಿಕಾರಿಗಳಿಂದ ಮೆಚ್ಚುಗೆ ದೊರೆಯುತ್ತದೆ. ನಿಮಗೆ ಸಂತೋಷ ಸಮಾಧಾನ ಮೂಡಲಿದೆ. ಶುಭದಿನ 14. ಲಿಂಗಾಷ್ಟಕ ಪಠಿಸಿರಿ.